KACM200002292019

# ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಕಡೂರು

ಉಪಸ್ಥಿತರುಃ- ಶ್ರೀಮತಿ. ಸುಜಾತ ಸುವರ್ಣ ಬಿ,
ಬಿ.ಕಾಂ., ಎಲ್.ಎಲ್.ಬಿ.,
ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ,
ಕಡೂರು, ಚಿಕ್ಕಮಗಳೂರು ಜಿಲ್ಲೆ.

**ಅಸಲು ದಾವಾ ಸಂಖ್ಯೆಃ 41/2019**

ದಿನಾಂಕಃ 7 ನೇ ಡಿಸೆಂಬರ್ - 2023.

ವಾದಿಯರು ಃ 1. ಶ್ರೀಮತಿ. ಭಾಗ್ಯವತಿ ಬಿ.ಕೆ.,
ತಂದೆಃ ಲೇಟ್ ಬಿ.ಹೆಚ್. ಕೃಷ್ಣಮೂರ್ತಿ
ಯಾನೆ ಹೆಚ್. ಮೂರ್ತಿ,
ಕೋಂ ಲೇಟ್ ರಾಧಕೃಷ್ಣ ವೈ.ಟಿ.
ವಯಸ್ಸುಃ ಸುಮಾರು 55 ವರ್ಷ,
ಗೃಹಿಣಿ,
ವಾಸಃ ಅಶೋಕ್ ನಗರ ಮುಖ್ಯ ರಸ್ತೆ,
ಅಂಚೆರ ಬೀದಿ, ಬೀರೂರು ಟೌನ್,

ಪ್ರಸ್ತುತ ವಾಸಃ ಕುವೆಂಪು ನಗರ,
ಎಲ್.ಐ.ಸಿ. ಕ್ವಾಟ್ರಸ್ ಎದುರು,
ಮಾದನಾಯಕನಹಳ್ಳಿ, ಮಾದವರ (ಅಂಚೆ)
ಬೆಂಗಳೂರು.

2. ಶ್ರೀಮತಿ. ಕಲಾವತಿ ಬಿ.ಕೆ.
ಯಾನೆ ಅಯೆಷಾ,

ತಂದೆಃ ಲೇಟ್ ಬಿ.ಹೆಚ್. ಕೃಷ್ಣಮೂರ್ತಿ
ಯಾನೆ ಹೆಚ್. ಮೂರ್ತಿ,
ವಯಸ್ಸುಃ ಸುಮಾರು 53 ವರ್ಷ,
ಗೃಹಿಣಿ,
ವಾಸಃ ಅಶೋಕ್ ನಗರ ಮುಖ್ಯ ರಸ್ತೆ,
ಅಂಚೆರ ಬೀದಿ, ಬೀರೂರು ಟೌನ್,

ಪ್ರಸ್ತುತ ವಾಸಃ ಹೊಸ ಅಜ್ಜಂಪುರ ರಸ್ತೆ,
ಶಿವಾಜಿನಗರ, ಬೀರೂರು ಟೌನ್,
ಕಡೂರು ತಾಲ್ಲೂಕು.

(ವಾದಿಯರ ಪರವಾಗಿಃ ಶ್ರೀ ಜಿ.ಎನ್. ವೇಣುಗೋಪಾಲ್, ವಕೀಲರು)

- ವಿರುದ್ಧ -

ಪ್ರತಿವಾದಿಯರು ಃ 1. ಶ್ರೀಮತಿ. ಶಾರದಮ್ಮ,
ಕೋಂ ಲೇಟ್ ಬಿ.ಹೆಚ್. ಕೃಷ್ಣಮೂರ್ತಿ
ಯಾನೆ ಹೆಚ್. ಮೂರ್ತಿ,
ವಯಸ್ಸುಃ ಸುಮಾರು 84 ವರ್ಷ,
ಗೃಹಿಣಿ,
ವಾಸಃ ಅಶೋಕ್ ನಗರ ಮುಖ್ಯ ರಸ್ತೆ,
ಅಂಚೆರ ಬೀದಿ, ಬೀರೂರು ಟೌನ್,
ಕಡೂರು ತಾಲ್ಲೂಕು.

2. ಶ್ರೀಮತಿ. ಲತಾ ಬಿ.ಕೆ.,
ತಂದೆಃ ಲೇಟ್ ಬಿ.ಹೆಚ್. ಕೃಷ್ಣಮೂರ್ತಿ
ಯಾನೆ ಹೆಚ್. ಮೂರ್ತಿ,
ಕೋಂ ನಾಗರಾಜ್ ಎಲ್.ಕೆ.,
ವಯಸ್ಸುಃ ಸುಮಾರು 42 ವರ್ಷ,
ಗೃಹಿಣಿ,

ವಾಸಃ ಸೊಸೈಟಿ ರಸ್ತೆ,
ಲಕ್ಕವಳ್ಳಿ ಗ್ರಾಮ ಮತ್ತು ಅಂಚೆ,
ತರೀಕೆರೆ ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ.

3. ಶ್ರೀಮತಿ. ಮಂಗಳಗೌರಿ ಕೆ.ಆರ್.,
ಕೋಂ ಲೇಟ್ ವಿಜಯಕುಮಾರ್ ಬಿ.ಕೆ.,
ವಯಸ್ಸುಃ ಸುಮಾರು 46 ವರ್ಷ,
ಗೃಹಿಣಿ,

4. ಶ್ರೀ ಹರೀಶ,
ಬಿನ್ ಲೇಟ್ ವಿಜಯಕುಮಾರ್ ಬಿ.ಕೆ.,
ವಯಸ್ಸುಃ ಸುಮಾರು 26 ವರ್ಷ,
ವ್ಯವಸಾಯಗಾರರು,

5. ಶ್ರೀ ಸತೀಶ್,
ಬಿನ್ ಲೇಟ್ ವಿಜಯಕುಮಾರ್ ಬಿ.ಕೆ.,
ವಯಸ್ಸುಃ ಸುಮಾರು 24 ವರ್ಷ,
ವ್ಯವಸಾಯಗಾರರು,

3 ರಿಂದ 5 ನೇ ಪ್ರತಿವಾದಿಯರ
ವಾಸಃ ಅಶೋಕ್ ನಗರ ಮುಖ್ಯ ರಸ್ತೆ,
ಅಂಚೆರ ಬೀದಿ, ಬೀರೂರು ಟೌನ್,
ಕಡೂರು ತಾಲ್ಲೂಕು.

6. ಶ್ರೀ ರಂಗಪ್ಪ ಶೆಟ್ಟಿ,
ಮೃತರಾಗಿದ್ದು, ಇವರ ವಾರಸುದಾರರಾದ

6(ಎ) ಶ್ರೀಮತಿ. ರತ್ನಮ್ಮ,
ಕೋಂ ಲೇಟ್ ರಂಗಪ್ಪ ಶೆಟ್ಟಿ,
ವಯಸ್ಸುಃ ಸುಮಾರು 65 ವರ್ಷ,

ಗೃಹಿಣಿ,
ವಾಸಃ ಮಾವ ಅಳಿಯ ಬಿಲ್ಡಿಂಗ್ ಹಿಂಭಾಗ,
ಅಗ್ರಹಾರ ಬಡಾವಣೆ, ಬಾಣಾವರ,
ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ.

6(ಬಿ) ಶ್ರೀಮತಿ. ಕೆ.ಆರ್. ಸುಜಾತ,
ತಂದೆಃ ಲೇಟ್ ರಂಗಪ್ಪ ಶೆಟ್ಟಿ,
ವಯಸ್ಸುಃ ಸುಮಾರು 42 ವರ್ಷ,
ಗೃಹಿಣಿ,
ವಾಸಃ ಸರ್ಕಾರಿ ಆಸ್ಪತ್ರೆಯ ಎದುರುಗಡೆ,
ಕಲ್ಲೇಶ್ವರ ಮೆಡಿಕಲ್, ಕಡೂರು ಟೌನ್,
ಕಡೂರು ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ.

6(ಸಿ) ಶ್ರೀಮತಿ. ಕೆ.ಆರ್. ಶೈಲಾ,
ತಂದೆಃ ಲೇಟ್ ರಂಗಪ್ಪ ಶೆಟ್ಟಿ,
ಕೋಂ ರಮೇಶ್,
ವಯಸ್ಸುಃ ಸುಮಾರು 40 ವರ್ಷ,
ವಾಸಃ ಕೆ.ಇ.ಬಿ. ಕ್ವಾಟ್ರಸ್,
ಸಕಲೇಶಪುರ, ಸಕಲೇಶಪುರ ತಾಲ್ಲೂಕು,
ಹಾಸನ ಜಿಲ್ಲೆ.

6(ಡಿ) ಶ್ರೀ ಕೆ.ಆರ್. ರವಿ,
ಬಿನ್ ಲೇಟ್ ರಂಗಪ್ಪ ಶೆಟ್ಟಿ,
ವಯಸ್ಸುಃ ಸುಮಾರು 38 ವರ್ಷ,
ವ್ಯಾಪಾರಸ್ಥರು,
ವಾಸಃ ಪ್ರಗತಿ ಟೈಲ್ಸ್,
ಜೇನುಕಲ್ಲು ಸಿದ್ದೇಶ್ವರ ದೇವಾಲಯದ ರಸ್ತೆ,
ಅರಸೀಕೆರೆ ಟೌನ್, ಅರಸೀಕೆರೆ ತಾಲ್ಲೂಕು,
ಹಾಸನ ಜಿಲ್ಲೆ.

6(ಇ) ಶ್ರೀ ಕೆ.ಆರ್. ಯೋಗಿಶ್,
ಬಿನ್ ಲೇಟ್ ರಂಗಪ್ಪ ಶೆಟ್ಟಿ,
ವಯಸ್ಸುಃ ಸುಮಾರು 36 ವರ್ಷ,
ವ್ಯಾಪಾರಸ್ಥರು,
ವಾಸಃ ಯಶಸ್ವಿನಿ ಬ್ಯಾಂಗಲ್ ಸ್ಟೋರ್,
ಫ್ಲಂಬಿಂಗ್ ಆ್ಯಂಡ್ ಸ್ಯಾನಿಟರಿ ವರ್ಕ್,
ಅಗ್ರಹಾರ ಬಡಾವಣೆ, ಬಾಣಾವರ ಟೌನ್,
ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ.

7 ಶ್ರೀ ಕೆ.ಎಲ್. ನಂಜುಂಡಪ್ಪ,
ಬಿನ್ ಲಿಂಗಪ್ಪ,
ವಯಸ್ಸುಃ ಸುಮಾರು 57 ವರ್ಷ,
ವ್ಯವಸಾಯಗಾರರು,
ವಾಸಃ ಅರವಿಂದನಗರ,
ಕೆ.ಆರ್.ಪೇಟೆ ಏರಿಯಾ,
ಚಿಕ್ಕಮಗಳೂರು ಟೌನ್,
ಚಿಕ್ಕಮಗಳೂರು ಜಿಲ್ಲೆ.

(1 ಹಾಗೂ 3 ರಿಂದ 5 ನೇ ಪ್ರತಿವಾದಿಯರ ಪರಃ
ಶ್ರೀ ಬಿ.ಆರ್. ಹರೀಶ್ ಕುಮಾರ್, ವಕೀಲರು)

(2 ನೇ ಪ್ರತಿವಾದಿ ಪರಃ ಶ್ರೀ ಹೆಚ್.ಎನ್. ಸುನೀಲ್ ಕುಮಾರ್, ವಕೀಲರು)

(ಪ್ರತಿವಾದಿ-6(ಬಿ) ಹಾಗೂ 6(ಸಿ) ಪರಃ ಶ್ರೀ ಎ.ಎಸ್. ಸ್ವಾಮಿ, ವಕೀಲರು)

(ಪ್ರತಿವಾದಿ-6(ಎ), 6(ಡಿ), 6(ಇ) ಹಾಗೂ 7 ನೇ ಪ್ರತಿವಾದಿ - ಏಕಪಕ್ಷೀಯವಾಗಿ)

<u>ಮಧ್ಯಂತರ ಅರ್ಜಿ ಸಂಖ್ಯೆ 5 ರ ಪಕ್ಷಗಾರರು</u>

ಅರ್ಜಿದಾರರು /
ವಾದಿಯರು ಃ ಶ್ರೀಮತಿ. ಭಾಗ್ಯವತಿ ಬಿ.ಕೆ. ಮತ್ತು ಇತರರು.

- ವಿರುದ್ಧ -

ಎದುರುದಾರರು /
ಪ್ರತಿವಾದಿಯರು ಃ ಶ್ರೀಮತಿ. ಶಾರದಮ್ಮ ಮತ್ತು ಇತರರು.

| | | |
|---|---|---|
| *i* | ಯಾವ ಕಾಯ್ದೆ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಲಾಗಿದೆಃ - | ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಹಾಗೂ 2 ಜೊತೆಗೆ ಸಹಕಲಂ 151 |
| *ii* | ಯಾವ ಪರಿಹಾರಕ್ಕಾಗಿಃ- | ತಾತ್ಕಾಲಿಕ ನಿರ್ಬಂಧಕಾಜ್ಞೆಗಾಗಿ |
| *iii* | ಯಾವ ದಿನಾಂಕದಂದು ಅರ್ಜಿಯನ್ನು ಸಲ್ಲಿಸಲಾಗಿದೆಃ- | ದಿನಾಂಕಃ 31.08.2023 |
| *iv* | ಅರ್ಜಿಯ ಸಂಖ್ಯೆಃ | 05 |
| *v* | ಅರ್ಜಿಗೆ ವಿರುದ್ಧವಾಗಿ ಆಕ್ಷೇಪಣೆಗಳನ್ನು ಸಲ್ಲಿಸಿದ ದಿನಾಂಕಃ- | ದಿನಾಂಕಃ 27.10.2023. |
| *vi* | ಸದರಿ ಅರ್ಜಿಯ ಮೇಲೆ ಘೋಷಿಸಿದ ಆದೇಶದ ದಿನಾಂಕಃ- | ದಿನಾಂಕಃ 07.12.2023. |

<u>ಅರ್ಜಿದಾರರು / ವಾದಿಯರು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಜೊತೆಗೆ ಸಹಕಲಂ 151 ರನ್ವಯ ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆಃ 5 ರ ಮೇಲಿನ ಆದೇಶ.</u>

ಅರ್ಜಿದಾರರು / ವಾದಿಯರು ಮಧ್ಯಂತರ ಅರ್ಜಿ ಸಂಖ್ಯೆ5 ನ್ನು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ

1 ಮತ್ತು 2 ಜೊತೆಗೆ ಸಹಕಲಂ 151 ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ, 1, 3 ರಿಂದ 5 ಹಾಗೂ 7 ನೇ ಪ್ರತಿವಾದಿಯರಾಗಲೀ, ಅವರ ಪ್ರತಿನಿಧಿಗಳಾಗಲೀ ಅಥವಾ ಅವರ ಏಜೆಂಟ್‌ರಾಗಲೀ ಹಾಗೂ ಅವರ ಪರ ಕೆಲಸ ಮಾಡುವಂತಹ ಯಾವುದೇ ವ್ಯಕ್ತಿಗಳು ಅರ್ಜಿಯಲ್ಲಿ ನಮೂದಿಸಿರುವ ಆಸ್ತಿಗಳನ್ನು ಈ ದಾವೆಯ ಅಂತಿಮ ತೀರ್ಪು ಆಗುವವರೆಗೆ ಮಾರಾಟ ಮಾಡಬಾರದೆಂದು ಹಾಗೂ ಹಸ್ತಾಂತರಿಸಬಾರದೆಂದು ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಬೇಕೆಂದು ಕೋರಿಕೊಂಡಿರುತ್ತಾರೆ.

2. ಅರ್ಜಿದಾರರು / 2 ನೇ ವಾದಿಯು ಮಧ್ಯಂತರ ಅರ್ಜಿ- 5 ಕ್ಕೆ ಪೂರಕವಾಗಿ ತಮ್ಮ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಪ್ರಮಾಣ ಪತ್ರದ ಸಾರಾಂಶ ಈ ಕೆಳಗಿನಂತಿರುತ್ತದೆ.

ದಾವಾ ಆಸ್ತಿಗಳು ವಾದಿಯರ ಮತ್ತು 1 ರಿಂದ 5 ನೇ ಪ್ರತಿವಾದಿಯರ ಒಟ್ಟು ಕುಟುಂಬದ ಹಾಗೂ ಪಿತ್ರಾರ್ಜಿತ ಸ್ವತ್ತುಗಳಾಗಿದ್ದು, ಅವರ ತಂದೆ - ಬಿ.ಹೆಚ್. ಕೃಷ್ಣಮೂರ್ತಿ ಯಾನೆ ಹೆಚ್. ಮೂರ್ತಿಯವರು ಜೀವಂತ ಇದ್ದಾಗ ದಾವಾ ಅನುಸೂಚಿ ಸಂಖ್ಯೆ: 1 ಹಾಗೂ 3 ರಿಂದ 6 ರ ಆಸ್ತಿಗಳು ಅವರ ಹೆಸರಿನಲ್ಲಿದ್ದು, ಅವರ ತಂದೆ ಮರಣ ಹೊಂದಿದ ನಂತರ 3 ನೇ ಪ್ರತಿವಾದಿಯ ಗಂಡ - ವಿಜಯಕುಮಾರ ಬಿ.ಕೆ. ಇವರ ಹೆಸರಿಗೆ ವಾದಿಯರಿಗೆ ತಿಳುವಳಿಕೆ ಬಾರದಂತೆ ದಾವಾ ಅನುಸೂಚಿ - 1 ಹಾಗೂ 3 ರಿಂದ 5 ರ ಸ್ವತ್ತುಗಳ ಖಾತೆಯು ಬದಲಾವಣೆಯಾಗಿರುತ್ತದೆ. ದಾವಾ ಅನುಸೂಚಿ

ಐಟಂ - 2 ರ ಆಸ್ತಿಯನ್ನು ಬಿ.ಕೆ.ವಿಜಯ ಕುಮಾರ್ ರವರು ದಿನಾಂಕಃ 22.03.2007 ರಂದು ಒಟ್ಟು ಕುಟುಂಬದ ಉತ್ಪನ್ನದಿಂದ ಟಿ.ಎಸ್. ನಾಗರಾಜ ಮತ್ತು ಅವರ ಕುಟುಂಬದ ಸದಸ್ಯರಿಂದ ಖರೀದಿ ಮಾಡಿರುತ್ತಾರೆ. ವಾದಿಯ ತಂದೆ ಜೀವಂತ ಇದ್ದಾಗ ಅವರ ತಂದೆಯೇ ವ್ಯವಹಾರ ನೋಡಿಕೊಳ್ಳುತ್ತಿದ್ದು, ಅವರು ತೀರಿಕೊಂಡ ನಂತರ ಬಿ.ಕೆ. ವಿಜಯಕುಮಾರ್ ಇವರು ಕುಟುಂಬದ ವ್ಯವಹಾರ ನೋಡಿಕೊಳ್ಳುತ್ತಿದ್ದು, ತದನಂತರ 1 ರಿಂದ 3 ನೇ ಪ್ರತಿವಾದಿಯರು ಒಟ್ಟು ಕುಟುಂಬದ ವ್ಯವಹರಣೆ ನೋಡಿಕೊಳ್ಳುತ್ತಿರುತ್ತಾರೆ.

ಬಿ.ಕೆ. ವಿಜಯಕುಮಾರ್ ಜೀವಂತ ಇದ್ದಾಗ, ಅವರು 3 ನೇ ಪ್ರತಿವಾದಿಯೊಂದಿಗೆ ಸೇರಿಕೊಂಡು ದಿನಾಂಕಃ 25.11.2017 ರಂದು ದಾವಾ ಅನುಸೂಚಿ-2 ರ ಆಸ್ತಿಯನ್ನು 6 ನೇ ಪ್ರತಿವಾದಿಗೆ ಕ್ರಯ ಮಾಡಿಕೊಟ್ಟಿದ್ದು ಮತ್ತು ದಿನಾಂಕಃ21.12.2017 ರಂದು ದಾವಾ ಅನುಸೂಚಿ-3 ರಿಂದ 5 ರ ಆಸ್ತಿಗಳನ್ನು 3 ನೇ ಪ್ರತಿವಾದಿಗೆ ಮರಣ ಶಾಸನ ಮೂಲಕ ಬರೆದು ಕೊಟ್ಟಿರುತ್ತಾರೆ. ಸದರಿ ಕ್ರಯಪತ್ರ ಮತ್ತು ಮರಣ ಶಾಸನವು ವಾದಿಯ ಹಿಸ್ಸೆಗೆ ಬಂಧನಕಾರಿಯಾಗಿರುವುದಿಲ್ಲ. ದಾವೆಯು ಚಾಲ್ತಿಯಲ್ಲಿದ್ದಾಗ 6 ನೇ ಪ್ರತಿವಾದಿಯು 7 ನೇ ಪ್ರತಿವಾದಿಗೆ ದಾವಾ ಅನುಸೂಚಿ-2 ರ ಬಾಬ್ತು ನೋಂದಾಯಿತ ಕ್ರಯಪತ್ರವನ್ನು ಬರೆದುಕೊಟ್ಟಿರುತ್ತಾರೆ. ಆದ್ದರಿಂದ, 1, 3 ರಿಂದ 5 ಹಾಗೂ 7 ನೇ ಪ್ರತಿವಾದಿಯರಿಗೆ ದಾವಾ ಆಸ್ತಿಗಳನ್ನು ಯಾರಿಗೂ ಮಾರಾಟ ಮಾಡಬಾರದಂತೆ ಆದೇಶ ಮಾಡಬೇಕಾಗಿ

ಕೋರಿಕೊಂಡಿರುತ್ತಾರೆ. ಆದ್ದರಿಂದ, ಅರ್ಜಿಯನ್ನು ಪುರಸ್ಕರಿಸಿ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಬೇಕೆಂದು ಕೋರಿಕೊಂಡಿರುತ್ತಾರೆ.

3. 1 ಹಾಗೂ 3 ರಿಂದ 5 ನೇ ಪ್ರತಿವಾದಿಯರು ನ್ಯಾಯಾಲಯಕ್ಕೆ ಹಾಜರಾಗಿ, ಮಧ್ಯಂತರ ಅರ್ಜಿ-5 ಕ್ಕೆ ತಕರಾರನ್ನು ಸಲ್ಲಿಸಿರುತ್ತಾರೆ. 2 ನೇ ಪ್ರತಿವಾದಿ ಪರ ವಕೀಲರು ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಲು ಯಾವುದೇ ತಕರಾರು ಇಲ್ಲವೆಂದು ಹೇಳಿರುತ್ತಾರೆ. 6 ನೇ ಪ್ರತಿವಾದಿಯ ವಾರಸುದಾರರು ಯಾವುದೇ ತಕರಾರನ್ನು ಸಲ್ಲಿಸಿರುವುದಿಲ್ಲ.

4. <u>1 ಹಾಗೂ 3 ರಿಂದ 5 ನೇ ಪ್ರತಿವಾದಿಯರ ತಕರಾರಿನ ಸಾರಾಂಶ ಈ ಕೆಳಗಿನಂತೆ ಇರುತ್ತದೆ.</u>

ಅರ್ಜಿದಾರರು ಸಲ್ಲಿಸಿದ ಅರ್ಜಿಯು ಕಾನೂನಿನ ಅಡಿಯಲ್ಲಾಗಲೀ ಅಥವಾ ವಸ್ತುಸ್ಥಿತಿಯಲ್ಲಾಗಲೀ ಊರ್ಜಿತವಾಗಿರುವುದಿಲ್ಲ. ಈ ದಾವೆಯು ವಾದಿಯ ವಿಚಾರಣೆಗೆ ಇದ್ದು, ವಾದಿಯು ತನ್ನ ವಿಚಾರಣೆ ಮಾಡದೇ ಈ ಅರ್ಜಿಯನ್ನು ಸಲ್ಲಿಸಿರುವುದರಿಂದ ಅರ್ಜಿಯು ಊರ್ಜಿತವಾಗಿರುವುದಿಲ್ಲ. ಕೇವಲ ದಾವೆಯನ್ನು ಮುಂದೂಡುವ ಸಲುವಾಗಿ ವಾದಿಯು ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಆದ್ದರಿಂದ, ಅರ್ಜಿಯನ್ನು ವಜಾಗೊಳಿಸಬೇಕೆಂದು ಕೋರಿಕೊಂಡಿರುತ್ತಾರೆ.

5. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

6. ನ್ಯಾಯಾಲಯವು ನಿರ್ಧರಿಸಬೇಕಾದ ಅಂಶಗಳು ಈ ಕೆಳಗಿನಂತಿವೆಃ-

1. ಮಧ್ಯಂತರ ಅರ್ಜಿ-5ರ ಅರ್ಜಿದಾರರು / ವಾದಿಯರು ಮೇಲ್ನೋಟಕ್ಕೆ ಸಾಬೀತುಪಡಿಸುವ ಪ್ರಕರಣವನ್ನು ಹೊಂದಿರುತ್ತಾರೆ ಎನ್ನುವುದನ್ನು ಸಾಬೀತುಪಡಿಸಿದ್ದಾರೆಯೇ?
2. ಅರ್ಜಿದಾರರು / ವಾದಿಯರು ತಮ್ಮ ಪರವಾಗಿ ಅನುಕೂಲತೆಯ ಸಮತೋಲನವನ್ನು ಹೊಂದಿರುತ್ತಾರೆ ಎನ್ನುವುದನ್ನು ಸಾಬೀತುಪಡಿಸಿದ್ದಾರೆಯೇ?
3. ಒಂದು ವೇಳೆ, ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶ ನೀಡದೇ ಇದ್ದಲ್ಲಿ, ತುಂಬಲಾರದ ನಷ್ಟ ಉಂಟಾಗುವ ಸಂಭವ ಇರುತ್ತದೆ ಎಂಬುದನ್ನು ವಾದಿಯರು ರುಜುವಾತುಪಡಿಸುವರೇ?
4. ಅರ್ಜಿದಾರರು / ವಾದಿಯರು ಮಧ್ಯಂತರ ಅರ್ಜಿ-5 ರಲ್ಲಿ ಕೋರಿದಂತೆ ದಾವೆ

ಮುಗಿಯುವವರೆಗೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಪಡೆಯಲು ಅರ್ಹರೇ?

5. ಆದೇಶವೇನು?

7. ನ್ಯಾಯಾಲಯದ ಮುಂದಿರುವ ಅಂಶಗಳನ್ನು ಹಾಗೂ ದಾಖಲೆಗಳನ್ನು ಹಾಗೂ ಉಭಯ ವಕೀಲರ ವಾದವನ್ನು ಆಲಿಸಿ, ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಿದೆಃ-

ಅಂಶ-1ಃ ಸಕಾರಾತ್ಮಕವಾಗಿ,

ಅಂಶ-2ಃ ಸಕಾರಾತ್ಮಕವಾಗಿ,

ಅಂಶ-3ಃ ಸಕಾರಾತ್ಮಕವಾಗಿ,

ಅಂಶ-4ಃ ಸಕಾರಾತ್ಮಕವಾಗಿ,

ಅಂಶ-5ಃ ಈ ಕೆಳಕಂಡ ಕಾರಣಗಳಿಗಾಗಿ ಅಂತಿಮ ಆದೇಶದದಂತೆ.

## ಕಾ ರ ಣ ಗಳು

8. ಅಂಶ-1 ಃ ವಾದಿಯು ಈ ದಾವೆಯನ್ನು ಪ್ರತಿವಾದಿಯರ ವಿರುದ್ಧ ದಿನಾಂಕಃ 25.11.2017 ರ ಕ್ರಯಪತ್ರ ಹಾಗೂ ದಿನಾಂಕಃ21.12.2017 ರ ಮರಣ ಶಾಸನವು ಅವರ 1/5 ನೇ ಅಂಶ ಹಿಸ್ಸೆಗೆ ಬಂಧನಕಾರಿಯಾಗಿರುವುದಿಲ್ಲವೆಂದು ಮತ್ತು ದಾವಾ ಆಸ್ತಿಗಳಲ್ಲಿ 1/5 ನೇ ಅಂಶ ಹಿಸ್ಸೆಯನ್ನು ಅವರಿಗೆ ಹಂಚಿಕೆ ಮಾಡಿ, ವಿಂಗಡಿಸಿ ಕೊಡಿಸಬೇಕೆಂದು ಕೋರಿಕೊಂಡಿರುತ್ತಾರೆ.

9. ವಾದಿಯ ಪ್ರಕಾರ, ದಾವಾ ಆಸ್ತಿಗಳು ಅವರ ಮತ್ತು 1 ರಿಂದ 5ನೇ ಪ್ರತಿವಾದಿಯರ ಒಟ್ಟು ಕುಟುಂಬದ ಹಾಗೂ ಪಿತ್ರಾರ್ಜಿತ ಸ್ವತ್ತುಗಳಾಗಿರುತ್ತದೆ, ಅವರ ತಂದೆ ಮರಣ ಹೊಂದಿದ ನಂತರ ವಾದಿಯರಿಗೆ ತಿಳುವಳಿಕೆ ಬಾರದಂತೆ ದಾವಾ ಅನುಸೂಚಿ - 1 ಹಾಗೂ 3 ರಿಂದ 5ರ ಸ್ವತ್ತುಗಳ ಖಾತೆಯು ವಿಜಯಕುಮಾರ ಬಿ.ಕೆ. ಇವರ ಹೆಸರಿಗೆ ಬದಲಾವಣೆಯಾಗಿರುತ್ತದೆ, ದಾವಾ ಅನುಸೂಚಿ ಐಟಂ - 2 ರ ಆಸ್ತಿಯನ್ನು ಬಿ.ಕೆ.ವಿಜಯ ಕುಮಾರ್ ರವರು ದಿನಾಂಕಃ 22.03.2007 ರಂದು ಒಟ್ಟು ಕುಟುಂಬದ ಉತ್ಪನ್ನದಿಂದ ಟಿ.ಎಸ್. ನಾಗರಾಜ ಮತ್ತು ಅವರ ಕುಟುಂಬದ ಸದಸ್ಯರಿಂದ ಖರೀದಿ ಮಾಡಿರುತ್ತಾರೆ, ಅವರ ತಂದೆ ತೀರಿಕೊಂಡ ನಂತರ ಬಿ.ಕೆ. ವಿಜಯಕುಮಾರ್ ರವರು ಕುಟುಂಬದ ವ್ಯವಹಾರ ನೋಡಿಕೊಳ್ಳುತ್ತಿದ್ದು, ತದನಂತರ 1 ರಿಂದ 3ನೇ ಪ್ರತಿವಾದಿಯರು ಒಟ್ಟು ಕುಟುಂಬದ ವ್ಯವಹರಣೆ ನೋಡಿಕೊಳ್ಳುತ್ತಿದ್ದರು ಎಂಬುದಾಗಿರುತ್ತದೆ.

10. ವಾದಪತ್ರದ ಪ್ರಕಾರ, ಬಿ.ಕೆ. ವಿಜಯಕುಮಾರ್ ಜೀವಂತ ಇದ್ದಾಗ, ಅವರು 3ನೇ ಪ್ರತಿವಾದಿಯೊಂದಿಗೆ ಸೇರಿಕೊಂಡು ದಿಃ25.11.2017 ರಂದು ದಾವಾ ಅನುಸೂಚಿ-2ರ ಆಸ್ತಿಯನ್ನು 6ನೇ ಪ್ರತಿವಾದಿಗೆ ಕ್ರಯ ಮಾಡಿಕೊಟ್ಟಿದ್ದು ಮತ್ತು ದಿನಾಂಕಃ 21.12.2017 ರಂದು ದಾವಾ ಅನುಸೂಚಿ-3 ರಿಂದ 5ರ ಆಸ್ತಿಗಳನ್ನು 3ನೇ ಪ್ರತಿವಾದಿಗೆ ಮರಣ ಶಾಸನದ ಮೂಲಕ ಬರೆದುಕೊಟ್ಟಿರುತ್ತಾರೆ,

ಸದರಿ ಕ್ರಯಪತ್ರ ಮತ್ತು ಮರಣ ಶಾಸನವು ವಾದಿಯ ಹಿಸ್ಸೆಗೆ ಬಂಧನಕಾರಿಯಾಗಿರುವುದಿಲ್ಲ, ದಾವೆಯು ಚಾಲ್ತಿಯಲ್ಲಿದ್ದಾಗ 6 ನೇ ಪ್ರತಿವಾದಿಯು 7 ನೇ ಪ್ರತಿವಾದಿಗೆ ದಾವಾ ಅನುಸೂಚಿ-2 ರ ಬಾಬ್ತು ನೋಂದಾಯಿತ ಕ್ರಯಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂಬುದಾಗಿರುತ್ತದೆ.

11. ಪ್ರತಿವಾದಿಯರ ಪ್ರಕಾರ, ಅರ್ಜಿಯು ಕಾನೂನಿನ ಅಡಿಯಲ್ಲಾಗಲೀ ಅಥವಾ ವಸ್ತುಸ್ಥಿತಿಯಲ್ಲಾಗಲೀ ಊರ್ಜಿತವಾಗಿರುವುದಿಲ್ಲ, ದಾವೆಯು ವಾದಿಯ ವಿಚಾರಣೆಗೆ ಇದ್ದು, ವಾದಿಯು ತನ್ನ ವಿಚಾರಣೆ ಮಾಡದೇ ಈ ಅರ್ಜಿಯನ್ನು ಸಲ್ಲಿಸಿರುವುದರಿಂದ ಅರ್ಜಿಯು ಊರ್ಜಿತವಾಗಿರುವುದಿಲ್ಲ ಹಾಗೂ ದಾವೆಯನ್ನು ಮುಂದೂಡುವ ಸಲುವಾಗಿ ವಾದಿಯು ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂಬುದಾಗಿರುತ್ತದೆ.

12. 1 ನೇ ಪ್ರತಿವಾದಿಯು ತಮ್ಮ ಪ್ರತಿವಾದ ಪತ್ರದಲ್ಲಿ, ದಾವಾ ಐಟಂ ನಂಬರ್ 2 ರಿಂದ 5 ರ ಸ್ವತ್ತುಗಳು ಅವರ ಮಗ – ಬಿ.ಕೆ. ವಿಜಯಕುಮಾರ್ ರವರಿಗೆ ಸಂಬಂಧಪಟ್ಟಿದ್ದು, ಆ ಆಸ್ತಿಗಳು ಅವರ ಸ್ವಯಾರ್ಜಿತ ಆಸ್ತಿಗಳಾಗಿರುತ್ತದೆಂದು, ಆ ಆಸ್ತಿಗಳಲ್ಲಿ ವಾದಿಯರಿಗೆ ಯಾವುದೇ ಹಕ್ಕು, ಅಧಿಕಾರ ಇರುವುದಿಲ್ಲ ಎಂಬುದಾಗಿದ್ದು, ಅವರ ಗಂಡ ಮತ್ತು ಮಗ ಜೀವಂತ ಇರುವಾಗ 1 ಮತ್ತು 2 ನೇ ವಾದಿಯರಿಗೆ ವಿವಾಹ ಮಾಡುವ ಸಂಬಂಧ ಸಾಲ ಮಾಡಿ, ಚಿನ್ನಾಭರಣವನ್ನು ಕೊಟ್ಟು, ಸಾಕಷ್ಟು ಹಣವನ್ನು ಖರ್ಚು

ಮಾಡಿ ವಿವಾಹವನ್ನು ಮಾಡಿಕೊಟ್ಟಿದ್ದು, ಆ ಸಾಲವನ್ನು ಮರುಪಾವತಿಸುವ ಸಲುವಾಗಿ ಬಿ.ಕೆ. ವಿಜಯಕುಮಾರ್ ರವರು ದಾವಾ ಅನುಸೂಚಿ-2 ರ ಆಸ್ತಿಯನ್ನು 6 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆಂದು ಖಂಡನೆಯನ್ನು ತೆಗೆದುಕೊಂಡಿರುತ್ತಾರೆ.

13. ವಂಶವೃಕ್ಷವನ್ನು ಗಮನಿಸಿದಾಗ, ವಂಶವೃಕ್ಷದಲ್ಲಿ ವಾದಿಯು 1 ನೇ ಪ್ರತಿವಾದಿ ಹಾಗೂ ಕೃಷ್ಣಮೂರ್ತಿಯವರ ಮಗಳು ಎಂದು ಕಂಡು ಬರುತ್ತದೆ. ಲಿಂಗ್ಲಾಪುರ ಗ್ರಾಮದ ಸರ್ವೆ ನಂಬರ್ 16/1 ರ ಪಹಣಿ ಪತ್ರಿಕೆಯನ್ನು ಗಮನಿಸಿದಾಗ, ಹೆಚ್.ಮೂರ್ತಿ ಇವರ ಹೆಸರಿನಲ್ಲಿ 4 ಎಕರೆ 18 ಗುಂಟೆ ಜಮೀನು ಇರುವುದು ಕಂಡು ಬರುತ್ತದೆ. ನಿ.ಪಿ-7 ಮ್ಯುಟೇಶನ್ ರಿಜಿಸ್ಟರ್ ಪ್ರತಿಯನ್ನು ಗಮನಿಸಿದಾಗ, ಸರ್ವೆ ನಂಬರ್ 76/ಪಿ-1 ಮತ್ತು 88/ಪಿ ಜಮೀನುಗಳು ಹೆಚ್.ಮೂರ್ತಿ ಇವರಿಂದ ವಿಜಯಕುಮಾರ್ ಬಿನ್ ಹೆಚ್.ಮೂರ್ತಿ ಇವರಿಗೆ ಖಾತೆ ಬದಲಾವಣೆಯಾಗಿರುವುದು ಕಂಡು ಬರುತ್ತದೆ.

14. ನಿ.ಪಿ-10 - 2015-16 ನೇ ಸಾಲಿನ ಆಸ್ತಿ ತೆರಿಗೆಯ ಬೇಡಿಕೆ, ಸಂಗ್ರಹಣೆ, ಬಾಕಿ ಹಾಗೂ ನಮೂನೆ-3 ರನ್ನೊಳಗೊಂಡ ರಿಜಿಸ್ಟರ್ ಪ್ರತಿಯಾಗಿದ್ದು, ಆ ದಾಖಲಾತಿಯನ್ನು ಗಮನಿಸಿದಾಗ, ದಾವಾ ಐಟಂ ನಂಬರ್-6 ರ ಸ್ವತ್ತು ಹೆಚ್.ಮೂರ್ತಿಯವರ ಹೆಸರಿನಲ್ಲಿರುವುದು ಕಂಡು ಬರುತ್ತದೆ. ವಾದಿಯು ಕ್ರಯಪತ್ರ ಮತ್ತು ಮರಣ ಶಾಸನವನ್ನು ನಿ.ಪಿ-11 ಮತ್ತು 12 ರಂತೆ ಹಾಜರುಪಡಿಸಿದ್ದು,

ಆ ದಾಖಲಾತಿಗಳು ಕಾನೂನು ಬದ್ದವಾಗಿ ಇರುತ್ತದೆಯೋ ಅಥವಾ ಇಲ್ಲವೋ ಎಂಬುದನ್ನು ಪುರಾವೆಗೊಳಿಸಲು ಸಾಕ್ಷ್ಯಾಧಾರಗಳ ಅವಶ್ಯಕತೆ ಇರುತ್ತದೆ. ಈ ಹಂತದಲ್ಲಿ ದಾಖಲಾತಿಗಳನ್ನು ಗಮನಿಸಿದಾಗ, ಕೆಲವೊಂದು ಸ್ವತ್ತುಗಳು ವಾದಿಯ ತಂದೆಯ ಹೆಸರಿನಿಂದ ಬಿ.ಕೆ. ವಿಜಯಕುಮಾರ್ ರವರ ಹೆಸರಿಗೆ ಖಾತೆ ಬದಲಾವಣೆಯಾಗಿರುವುದು ಕಂಡು ಬರುತ್ತದೆ. ದಾವಾ ಆಸ್ತಿಗಳು ಬಿ.ಕೆ. ವಿಜಯಕುಮಾರ್ ರವರ ಸ್ವಯಾರ್ಜಿತ ಆಸ್ತಿಗಳೆಂದು ಈ ಹಂತದಲ್ಲಿ ಅಭಿಪ್ರಾಯಿಸಲು ಸಾಧ್ಯವಿಲ್ಲ. ಇದನ್ನು ಪರಿಗಣಿಸಲು ವಾದಿ ಮತ್ತು ಪ್ರತಿವಾದಿಯರ ಸಂಪೂರ್ಣ ಸಾಕ್ಷ್ಯ ವಿಚಾರಣೆಯ ಅವಶ್ಯಕತೆ ಇರುತ್ತದೆ.

15. ದಾವೆಯು ವಿವಾದದಲ್ಲಿರುವಾಗ ದಾವಾ ಸ್ವತ್ತುಗಳಿಗೆ ಹಾನಿಯಾಗುತ್ತದೆ ಎಂಬ ಭಯವಿದ್ದರೂ ಕೂಡ ಅದನ್ನು ತಡೆಯುವುದು ಅವಶ್ಯಕತೆಯಾಗಿರುತ್ತದೆ. ವಾದಿಯರು ಹಾಜರುಪಡಿಸಿದಂತಹ ದಾಖಲಾತಿಗಳನ್ನೆಲ್ಲಾ ಗಮನಿಸಿದಾಗ, ಈ ಹಂತದಲ್ಲಿ ಮೇಲ್ನೋಟಕ್ಕೆ ವಾದಿಯರು ಸಮ್ಮತವಾದ ದಾವೆಯನ್ನು ಹೊಂದಿದ್ದಾರೆಂದು ಕಂಡು ಬಂದಿರುವುದರಿಂದ, ಅಂಶ-1 ಕ್ಕೆ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

16. **ಅಂಶ-2 ರಿಂದ 4ಃ-** ಈ ಮೂರು ಅಂಶಗಳು ಒಂದಕ್ಕೊಂದು ಪೂರಕವಾಗಿದ್ದರಿಂದ, ಅವುಗಳನ್ನು ಏಕಕಾಲಕ್ಕೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

ದಾವೆಯು ವಿವಾದದಲ್ಲಿರುವಾಗ ಯಾವುದೇ ಸ್ವತ್ತು ದಾವೆಯ ಯಾವುದೇ ಪಕ್ಷಗಾರರಿಂದ ಹಾನಿಗೊಳಗಾಗುವ ಅಥವಾ ಪರಭಾರೆ ಮಾಡುವ ಅಥವಾ ವಾದಿಯ ಸ್ವಾಧೀನದಿಂದ ತಪ್ಪಿಸುವುದಕ್ಕಾಗಿ ಪ್ರಯತ್ನ ಮಾಡುತ್ತಿದ್ದಲ್ಲಿ, ಮುಂದಿನ ಆದೇಶವಾಗುವವರೆಗೆ ಅಂತಹ ಕೃತ್ಯವನ್ನು ನಿಗ್ರಹಿಸುವ ಮೂಲಕ ನ್ಯಾಯಾಲಯವು ಆದೇಶದ ಮೂಲಕ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಬಹುದಾಗಿದೆ. ದಾವಾ ಸ್ವತ್ತಿನ ಬಗ್ಗೆ ವಾದಿಸುತ್ತಿರುವ ಪಕ್ಷಗಾರರು ತಮ್ಮ ಹಕ್ಕುಗಳನ್ನು ನಿರ್ಣಯಿಸುವವರೆಗೆ ದಾವಾ ಸ್ವತ್ತಿನ ಸ್ಥಿತಿ-ಗತಿಗಳನ್ನು ದಾವೆ ಹೂಡುವಾಗ ಇದ್ದ ಸ್ಥಿತಿಯಲ್ಲಿ ಇರಿಸಿಕೊಂಡು ಹೋಗಬೇಕೆಂದು ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಮಾಡಬೇಕೆಂದು ಇರುವ ಇನ್ನೊಂದು ಮಹತ್ವದ ಉದ್ದೇಶವಾಗಿರುತ್ತದೆ.

17. ವಾದಿಯು ಕೇವಲ ಈ ದಾವೆಯು ಮುಗಿಯುವವರೆಗೆ 1, 3 ರಿಂದ 5 ಹಾಗೂ 7 ನೇ ಪ್ರತಿವಾದಿಯರಿಗೆ ದಾವಾ ಆಸ್ತಿಗಳನ್ನು ಯಾರಿಗೂ ಯಾವುದೇ ರೀತಿಯಿಂದ ಪರಭಾರೆ ಮಾಡದಂತೆ ಹಾಗೂ ಹಸ್ತಾಂತರಿಸದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಬೇಕೆಂದು ಕೋರಿಕೊಂಡಿರುವುದು ಕಂಡು ಬಂದಿದ್ದು, ಒಂದು ವೇಳೆ ದಾವೆ ಚಾಲ್ತಿಯಲ್ಲಿರುವಾಗ ದಾವಾ ಆಸ್ತಿಗಳನ್ನು ಪ್ರತಿವಾದಿಯರು ಮಾರಾಟ ಮಾಡಿದ್ದಲ್ಲಿ ಅಥವಾ ಹಸ್ತಾಂತರಿಸಿದ್ದಲ್ಲಿ ವಾದಿಯರಿಗೆ ತುಂಬಲಾರದ ನಷ್ಟ ಉಂಟಾಗುತ್ತದೆ ಹಾಗೂ ಅನುಕೂಲತೆಯ ಸಮತೋಲನವು ವಾದಿಯರ ಪರವಾಗಿರುತ್ತದೆ.

ಆದರೆ ಈ ದಾವೆಯಲ್ಲಿ ಅಂತಿಮ ತೀರ್ಪು ಆಗುವವರೆಗೂ ದಾವಾ ಆಸ್ತಿಗಳನ್ನು ಬೇರೆ ಯಾರಿಗೂ ಮಾರಾಟ ಮಾಡಬಾರದಂತೆ ಆದೇಶ ಮಾಡಿದ್ದಲ್ಲಿ, ಪ್ರತಿವಾದಿಯರಿಗೆ ಯಾವುದೇ ರೀತಿಯಾದಂತಹ ತೊಂದರೆ ಉಂಟಾಗುವುದಿಲ್ಲ. ಆದ್ದರಿಂದ, ಮೇಲೆ ಹೇಳಿದ ಕಾರಣಗಳಿಂದಾಗಿ ಅಂಶ-2 ರಿಂದ 4 ನ್ನು ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

18. **ಅಂಶ-5**ಃ- ಮೇಲೆ ಹೇಳಿದ ಕಾರಣಗಳಿಂದ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

ಆದೇಶ

ಅರ್ಜಿದಾರರು / ವಾದಿಯರು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಜೊತೆಗೆ ಸಹಕಲಂ 151 ರಡಿಯಲ್ಲಿ ಸಲ್ಲಿಸಿದಂತಹ ಮಧ್ಯಂತರ ಅರ್ಜಿ ಸಂಖ್ಯೆ5 ನ್ನು ಪುರಸ್ಕರಿಸಲಾಗಿದೆ.

ಈ ದಾವೆಯಲ್ಲಿ ಅಂತಿಮ ತೀರ್ಪು ಆಗುವವರೆಗೆ, 1, 3 ರಿಂದ 5 ಹಾಗೂ 7 ನೇ ಪ್ರತಿವಾದಿಯರು ದಾವಾ ಆಸ್ತಿಗಳನ್ನು ಯಾರಿಗೂ ಮಾರಾಟ ಮಾಡಬಾರದಂತೆ

ಹಾಗೂ ಹಸ್ತಾಂತರಿಸದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಲಾಗಿದೆ.

ಖರ್ಚಿನ ಬಗ್ಗೆ ಯಾವುದೇ ಆದೇಶ ಇರುವುದಿಲ್ಲ.

(ಈ ಆದೇಶವನ್ನು ಬೆರಳಚ್ಚುಗಾರರಿಗೆ ಗಣಕಯಂತ್ರದ ಮೇಲೆ ನೇರವಾಗಿ ಉಕ್ತಲೇಖನ ನೀಡಿ, ನಂತರ ಓದಿ, ತಿದ್ದುಪಡಿ ಮಾಡಿ ತೆರೆದ ನ್ಯಾಯಾಲಯದಲ್ಲಿ 7 ನೇ ಡಿಸೆಂಬರ್-2023 ರಂದು ಘೋಷಿಸಲಾಯಿತು)

ಸಹಿ/-
(ಸುಜಾತ ಸುವರ್ಣ ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕಡೂರು.